ಪ್ರಯತ್ನಿಸಿದ್ದಳು. ಸಣ್ಣಪ್ರಾಯದಲ್ಲೇ ಗಂಡನನ್ನು ಕಳೆದುಕೊಂಡು ಮಗನನ್ನು ಸಾಕಿ ಸಲಹುವುದರ ಜೊತೆ ಹೊರಪ್ರಪಂಚದ ವಹಿವಾಟಿಗೂ ಅನಿವಾರ್ಯವಾಗಿ ತೆರೆದುಕೊಳ್ಳಬೇಕಾದ ಅತ್ತೆ ಸಾಧುಸಜ್ಜನಳಂತಿದ್ದರೆ ಜನ ಹರಿದು ತಿನ್ನುತ್ತಿದ್ದರು ಎಂದು ಛಾಯಾಳಿಗೆ ಅರ್ಥ ಮಾಡಿಸಿದ್ದ ಅವಳ ಗಂಡ. 'ಪಾಪ...' ಅನಿಸಿತ್ತು ಛಾಯಾಳಿಗೆ. ಅದೇ ಪದವನ್ನು ತನಗೂ ಅನ್ವಯಿಸಿಕೊಳ್ಳಬೇಕಾದ ಪರಿಸ್ಥಿತಿ ಇಷ್ಟು ಬೇಗ ಬರಬಹುದೆಂದು ಕನಸಲ್ಲಾದರೂ ಅಂದುಕೊಂಡಿದ್ದಿತ್ತೇ? 'ಈ ಮನೆಗೆ ಏನೋ ಶಾಪ ಕಣೇ. ಯಾರೂ ಉದ್ಧಾರಾಗಲ್ಲ ಇಲ್ಲಿ' ಅತ್ತೆ ಹೇಳುವಾಗ ತನ್ನ ಕಂದನನ್ನು ಅಪ್ಪಿಕೊಂಡು ಏರಿದ್ದ ಎದೆಬಡಿತವನ್ನು ತಹಬಂದಿಗೆ ತಂದುಕೊಂಡಿದ್ದಳು ಛಾಯಾ.

***

ಹಟ. ಹಟ ಅಂದರೆ ಹಟ. ಉಡದ ಪಟ್ಟು. "ಮನೇಲಿ ಖಾಲಿ ಕೂರ್ಬೇಡ ನೀನು. ಮುಂದೆ ಓದು. ಏನಾದ್ರೂ ಒಂದು ಕೆಲಸ ಹುಡುಕ್ಕಾ..." ಅತ್ತೆಯ ಮಾತು ಕೇಳಿ ಛಾಯಾಳಿಗೆ ಜೀವ ಬಾಯಿಗೆ ಬಂದಿತ್ತು. ಎಳೆಮಗುವನ್ನು ಮನೆಯಲ್ಲಿ ಬಿಟ್ಟು ಕಾಲೇಜಿಗೆ ಸೇರುವುದಾ? ಈಗಾಗಲೇ ಅರೆಜೀವ ಆದಂತಿರುವ ಅತ್ತೆ ಹೊತ್ತುಹೊತ್ತಿಗೆ ಮಗುವಿನ ಬೇಕುಬೇಡಗಳನ್ನು ಗಮನಿಸುವುದಲ್ಲದೆ ಮನೆಕೆಲಸಗಳನ್ನು ನಿಭಾಯಿಸುವಷ್ಟು ಗಟ್ಟಿಮುಟ್ಟಾಗಿದ್ದಾರೆಯೇ? ಎಲ್ಲಕ್ಕಿಂತಾ ಮಿಗಿಲಾಗಿ ಈ ಪರಿಸ್ಥಿತಿಯಲ್ಲಿ ಓದು ತನ್ನ ತಲೆಗೆ ಹತ್ತುತ್ತದೆ ಅನ್ನುವುದೇ ನಂಬಲಾಗದ ಸಂಗತಿ. ಹುಚ್ಚು ಅಷ್ಟೇ. ತಿಕ್ಕಲು ತಿರುಗಿದಾಗ ಅತ್ತೆ ಏನೋ ಹೇಳಿದರು ಅಂದರೆ ಹಾಗಾಗಲಿಲ್ಲ. ಅಣ್ಣನ ಕೈಲಿ ಎಂದೋ ಮೂಲೆ ಸೇರಿದ್ದ ಎಸ್ಸೆಸ್ಸೆಲ್ಸಿಯ ಅಂಕಪಟ್ಟಿ ತರಿಸಿ, ಅವನಿಂದಲೇ ಪೇಟೆಯ ಪಿ.ಯು. ಕಾಲೇಜಿನಿಂದ ಫಾರಂ ತರಿಸಿ, 'ನಿಮ್ಮತ್ತೆಗೆ ಸ್ವಲ್ಪ ಸ್ಕ್ರೂ ಲೂಸ್ ಆಗಿದೇಂತ ಕಾಣುತ್ತೆ. ನೀನು ಓದ್ತೀಯಾ ಮತ್ತೇಂತದು? ಬೇರೆ ಕಸುಬಿಲ್ಲ ಅವ್ರಿಗೆ...' ಅಣ್ಣ ತಾತ್ಸಾರದ ಮಾತಾಡುವಾಗ ಅತ್ತೆಯ ಬಗ್ಗೆ 'ಅಯ್ಯೋ...' ಅನಿಸಿ ಅವರ ಕನಸನ್ನು ನನಸು ಮಾಡಬೇಕೆಂಬ ಛಲವೇನೋ ಹುಟ್ಟಿಕೊಂಡಿತ್ತು. ಆದರೆ, ಅದು ತನ್ನ ಗಂಡನಂತೆ ಅಲ್ಪಾಯುಷಿ. ಪುಗಸಟ್ಟೆ ಕೂರಬಾರದೆಂದು ಅತ್ತೆ ತನ್ನನ್ನು ಓದಿಸುವ ಯೋಚನೆ ಮಾಡಿದ್ದಾರೆಂಬುದಕ್ಕಿಂತಾ ತನ್ನನ್ನೊಂದು ದುಡ್ಡಿನ ಗಿಡ ಆಗಿ ಬೆಳೆಸಬೇಕೆಂಬ ದುರಾಲೋಚನೆಯೋ, ದೂರಾಲೋಚನೆಯೋ ಅತ್ತೆಯ ತಲೆ ಹೊಕ್ಕಿದೆಯೇ ಎನ್ನುವ ಸಂದೇಹ ಕಾಡತೊಡಗಿತ್ತು. ಇರುವ ಜಮೀನಿನಿಂದ ಬರುವ ಉತ್ಪನ್ನ ಅಷ್ಟಕ್ಕಷ್ಟೇ. ಮನೆಯಲ್ಲೊಂದು ಮಗು ಬೇರೆ ಹುಟ್ಟಿಕೊಂಡಿದೆ. ಅದನ್ನು ಸಾಕಿ ಬೆಳೆಸಿ ಅದರ ಕಾಲ ಮೇಲೆ ನಿಲ್ಲುವಂತೆ ಮಾಡುವ ಜವಾಬ್ದಾರಿ ಸಸಾರದ್ದಲ್ಲ. ಮುಂಚಿನ ಕಾಲದಂತಲ್ಲ ಈ ಕಾಲ. ಒಳ್ಳೆಯ ಸ್ಕೂಲಿಗೆ ಸೇರಿಸಿ ಓದಿಸಬೇಕೆಂದರೆ ಲಕ್ಷಗಟ್ಟಲೆ ಕೈಯಲ್ಲಿಟ್ಟುಕೊಂಡಿರಬೇಕಾದ ಜಮಾನಾ. ಸೊಸೆ ನಾಲ್ಕು ಕಾಸು ದುಡಿದು ತರುವಂತಾದರೆ ಕೈಂಯಲ್ಲ ಎಂದು ಯೋಚಿಸಿರಬಹುದಾದ ಅತ್ತೆ ಸಾಮಾನ್ಯರೇನಲ್ಲ ಅನಿಸಲು ಶುರುವಾಗಿಬಿಟ್ಟಿತ್ತು ಛಾಯಾಳಿಗೆ. ತಮ್ಮ ಮಗನಿಂದ ಯಾವುದು ಸಾಧ್ಯವಾಗಿರಲಿಲ್ಲವೋ ಅದನ್ನು ಸೊಸೆಯಿಂದ ಪೂರೈಸಿಕೊಳ್ಳುವ ಹುನ್ನಾರ. ಹೊಟ್ಟೆಯಲ್ಲಿ ಹುಟ್ಟಿದ ಮಗನಿಗೆ ದಬಾವಣೆ ಹಾಕಲು ಕರುಳು ಕೇಳುವುದಿಲ್ಲ. ಸೊಸೆಯ ಮೇಲೆ ಜಬರ್ದಸ್ತು ಮಾಡಲು ಏನಡ್ಡಿ? ಹೇಗೂ ಇಲ್ಲಿಗೆ ಕಚ್ಚಿಕೊಂಡಿರುತ್ತಾಳೆ. ಇಲ್ಲಿ ಬಿಟ್ಟರೆ ಬೇರೆ ಗತಿಯಿಲ್ಲ ಎಂದು ಅತ್ತೆ ಅಂದಾಜು ಮಾಡಿಯೇ ಇರುತ್ತಾರೆ. ಅವರ ಇಚ್ಛೆಗೆ ಬಡಪೆಟ್ಟಿಗೆ ಮಣಿದಿರಲಿಲ್ಲ ಛಾಯಾ. ವಿರೋಧದ ಹತ್ತು ಮಾತಾಡಿದ್ದಳು. "ಕೂರಿಸಿ ಅನ್ನ ಹಾಕೋಕಾಗ್ದಿದ್ರೆ ಯಾರ ಮನೆಗಾದ್ರೂ ಕೂಲಿಗೆ ಕಳಿಸಿ. ಕಾಲೇಜು ಮಾತ್ರಾ ಬೇಡಾಂದ್ರೆ ಬೇಡ..."

"ಥೂ ನಿನ್ನ ಜನ್ಮಕ್ಕಿಷ್ಟು. ನನ್ನ ಮಗಳಾಗಿದ್ರೆ ಸಿಗಿದು ತೋರಣ ಕಟ್ತಿದ್ದೆ. ಕೂಲಿ ಕೆಲಸಕ್ಕೆ ಹೋಗ್ತೀನಿ ಅನ್ನೋಕೆ ನಾಚಿಕೆಯಾಗಲ್ವಾ ನಿಂಗೆ? ಹಲ್ಲುದುರೋ ಹಾಗೆ ಕಪಾಳಕ್ಕೆ ನಾಕು ಬಿಗೀಬೇಕು ಅನ್ನಿಸ್ತಿದೆ..."

"ಬಿಗೀರಿ, ಯಾರು ಬ್ಯಾಡಾಂದೋರು?"

"ನೋಡು, ನೀನು ಏನೇ ವೇಷ ಕಟ್ಟು. ನೀನು ಮುಂದೆ ಓದ್ಬೇಕು ಅಷ್ಟೇ..."

ಹೆಗಲೇರಿ ಕುಳಿತ ಶನಿಯಂತೆ ಬಿಡದೆ ಕಾಡಿದ ಅತ್ತೆಯ ರಗಳೆಯಿಂದ ತಪ್ಪಿಸಿಕೊಳ್ಳುವುದಕ್ಕೋಸ್ಕರವಾದರೂ ಮುಂದೆ ಓದಲು ಒಪ್ಪಿಗೆ ಕೊಡಬೇಕಾಯ್ತು ಛಾಯಾ.

***